ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ    ದಿನಾಂಕ : DATE : 13/07/2019

## ಯಾರನ್ನೂ ಸಂತೋಷಪಡಿಸಲು ನಾನು ನೃತ್ಯಗಾರನಾಗಲಾರೆ

# ನಾನೇನು ಡ್ಯಾನ್ಸರ್ ಅಲ್ಲ: ಸ್ಪೀಕರ್

## ಸಾಂವಿಧಾನಿಕ ಹುದ್ದೆಯಲ್ಲಿದ್ದೇನೆ, ಸಂವಿಧಾನಕ್ಕೆ ಬದ್ಧವಾಗಿ ನಡೆಯುತ್ತೇನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 13/7/19

ಸಾಂವಿಧಾನಿಕ ಹುದ್ದೆಯಲ್ಲಿರುವ ನಾನು ಸಂವಿಧಾನಕ್ಕೆ ಬದ್ಧವಾಗಿ, ನಡೆಯುವ ಜವಾಬ್ದಾರಿ ನಿರ್ವಹಿಸಬೇಕಿದೆ. ಯಾರು ನನ್ನ ತೇಜೋವಧೆ ಮಾಡಿದರೂ ನನ್ನ ಬದ್ಧತೆ ಬದಲಾಗುವುದಿಲ್ಲ. ಏಕೆಂದರೆ, ಯಾರನ್ನೋ ಖುಷಿ ಪಡಿಸಲು ನೃತ್ಯ ಮಾಡುವ ನೃತ್ಯಗಾರ್ತಿ ನಾನಲ್ಲ ಎಂದು ವಿಧಾನಸಭೆ ಸಭಾಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ಹೇಳಿದ್ದಾರೆ.

ಅತೃಪ್ತ ಶಾಸಕರ ರಾಜೀನಾಮೆ ಅಂಗೀಕಾರ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂಬ ಆರೋಪಗಳಿಗೆ ರಮೇಶ್ ಕುಮಾರ್ ನೀಡಿದ ಪ್ರತಿಕ್ರಿಯೆಯಿದು.



ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರನ್ನು ಕೊಂದ ದೇಶ ನಮ್ಮದು. ನಮಸ್ಕರಿಸಿದವರೇ ಗುಂಡಿಕ್ಕಿ ಗಾಂಧೀಜಿಯನ್ನು ಕೊಂದರು. ಆದರೆ, ಇಂದು ಗಾಂಧೀಜಿ ನಿಜವಾಗಿಯೂ ಸತ್ತಿದ್ದಾರೆಯೇ' ಎಂದು ಪ್ರಶ್ನಿಸಿದ ಅವರು, 'ನಾವು ಗಾಂಧೀಜಿ ತತ್ವಗಳನ್ನು ಪಾಲಿಸುವವರು' ಎಂದರು.

ದೇಶದಲ್ಲಿ ನ್ಯಾಯಾಂಗ ಹಾಗೂ ಶಾಸಕಾಂಗ ಉಳಿಯಬೇಕು. ಸಂವಿಧಾನಾತ್ಮಕವಾಗಿ ನೇಮಕವಾದ ಒಬ್ಬ ಪ್ರತಿನಿಧಿಯಾಗಿ ಪ್ರಜಾಪ್ರಭುತ್ವದ ಘನತೆಗೆ ಕುಂದು ಬಾರದ ರೀತಿಯಲ್ಲಿ ನಡೆದುಕೊಳ್ಳುವ ಜವಾಬ್ದಾರಿ ನನ್ನ ಮೇಲಿದೆ. ರಾಜ್ಯದ ಜನರ ಮನಸ್ಸಿಗಾದ ನೋವಿಗೆ ಗೌರವ ಕೊಟ್ಟು ನನ್ನ ಕರ್ತವ್ಯದಿಂದ ವಿಮುಖನಾಗದಂತೆ ಕಾರ್ಯ ನಿರ್ವಹಿಸುವುದು ನನ್ನ ಜವಾಬ್ದಾರಿ. ಸಂವಿಧಾನಕ್ಕೆ ಅಪಚಾರ ಮಾಡದೆ ಗೌರವ ಕೊಟ್ಟು ಕೆಲಸ ಮಾಡುತ್ತೇನೆ. ಯಾರನ್ನೋ ಸಂತೋಷಪಡಿಸಲು ನಾನು ನೃತ್ಯಗಾರ್ತಿಯಾಗಿ ನೃತ್ಯ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನನಗೆ ಎಲ್ಲವೂ ಸಂವಿಧಾನವೇ. ನಾನು ಸಂವಿಧಾನಕ್ಕೆ ಅಪಚಾರ ಮಾಡುವುದಿಲ್ಲ ಹಾಗೂ ಯಾರ ಒತ್ತಡಕ್ಕೂ ಮಣಿಯುವುದಿಲ್ಲ. ಈ ವಿಷಯದಲ್ಲಿ ನನ್ನ ತೇಜೋವಧೆ ಮಾಡುತ್ತಿದ್ದಾರೆ ಮಾಡಲಿ, ಮಾಡುವವರಿಗೆ ಒಳ್ಳೆಯದಾಗಲಿ. ಮಹಾತ್ಮ ಗಾಂಧೀಜಿ ಅವರನ್ನು ಕೊಂದ ದೇಶ ನಮ್ಮದು. ಅವರನ್ನು ದೈಹಿಕವಾಗಿ ಗಾಂಧೀಜಿ ಅವರನ್ನು ಸಾಯಿಸಿದ್ದರೂ ನಮ್ಮ ದೃಷ್ಟಿಯಲ್ಲಿ ಗಾಂಧೀಜಿ ಸತ್ತಿದ್ದಾರಾ ಎಂದು ಪ್ರಶ್ನಿಸಿದರು.

**ಸುಪ್ರೀಂಕೋರ್ಟ್ ಆದೇಶ ನೋಡಿಕೊಂಡು ಕ್ರಮ:** ಶಾಸಕರ ರಾಜೀನಾಮೆ ಪಡೆದು ನಿರ್ಧಾರ ತಿಳಿಸುವಂತೆ ನ್ಯಾಯಾಲಯ ತಿಳಿಸಿತ್ತು. ಇದರಂತೆ ಗುರುವಾರ ಶಾಸಕರ ರಾಜೀನಾಮೆಯನ್ನು ಪಡೆಯಲಾಗಿದೆ. ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣ ವಿಚಾರಣೆಯಲ್ಲಿದೆ. ಸುಪ್ರೀಂಕೋರ್ಟ್ ಏನು ತೀರ್ಮಾನ ಮಾಡುತ್ತದೆಯೋ ನೋಡೋಣ. ನಮಗೆ ಅನ್ವಯವಾಗುತ್ತದೆಯೋ, ಇಲ್ಲವೋ ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.